# ಮಕ್ಕಳಿಗೊಂದು ಅಕ್ಷರವಿನ್ಯಾಸ

**ಆನೆಯ ದಂತ ಹಾಗೂ ಸೊಂಡಿಲನ್ನು ಹೋಲುವ ‘ಬಂಡೀಪುರ ಫಾಂಟ್’ ರಚಿಸಿ ಪ್ರಸಿದ್ಧಿಗೊಂಡ ತಿ. ನರಸೀಪುರದ ಮಂಜುನಾಥ, ಮಕ್ಕಳ ಬರವಣಿಗೆಯಂತಿರುವ ಹೊಸ ಫಾಂಟ್ ರಚಿಸಿದ್ದಾರೆ.**

**■ ಶಶಿಕುಮಾರ್ ಸಿ.**

‘ಎತ್ತು ಏರಿಗೆಳೆದರೆ, ಕೋಣ ನೀರಿಗೆಳೆಯಿತು’ ಎಂಬಂತೆಯೇ ಇರುವ ಚಿಕ್ಕಮಕ್ಕಳ ಬರವಣಿಗೆ ಬಲು ಚೆಂದ. ಮುದ್ದು ಮುದ್ದಾಗಿ, ತಪ್ಪುತಪ್ಪಾಗಿ, ಚಿತ್ ಮಾಡಿ ಬರೆದ ಅವರ ಬರವಣಿಗೆ ನೋಡಿದಾಕ್ಷಣ ಎಂಥವರಲ್ಲೂ ಒಮ್ಮೆ ಬಾಲ್ಯದ ಸಿಹಿನೆನಪು ಹಾದುಹೋಗುತ್ತದೆ. ಅಂಥ ಅಕ್ಷರದ ಮಾದರಿಯು ಕಂಪ್ಯೂಟರಿನಲ್ಲಿ ಟೈಪಿಸುವ ಡಿಜಿಟಲ್ ಫಾಂಟ್ ಆಗಿ ರೂಪುಗೊಂಡರೆ... ಆಹಾ... ನೋಡಲು ಎಷ್ಟು ಚೆಂದವಲ್ಲವೇ...

ಇಂತಹದ್ದೊಂದು ಸಾಹಸಕ್ಕೆ ಕೈಹಾಕಿ ಯಶಸ್ವಿಯಾಗಿದ್ದಾರೆ ಮಂಜುನಾಥ ಆರ್. ಮಕ್ಕಳು ಬರೆದಂತೆಯೇ ಅನುಭವ ಕಟ್ಟಿಕೊಡುವ ಸಲುವಾಗಿ ‘ಎಟಿಎಸ್ ಚಿಕ್ಕಮಗಳೂರು’ (ATS Chikkamagaluru) ಹೆಸರಿನ ಫಾಂಟ್ ಬಿಡುಗಡೆ ಮಾಡಿರುವ ಇವರು, ಕನ್ನಡದಲ್ಲಿ ಈ ರೀತಿಯ ಫಾಂಟ್ ರೂಪಿಸಿದ ಮೊದಲಿಗರು. ಇಂಗ್ಲಿಷ್ ಸೇರಿದಂತೆ ಪಾಶ್ಚಾತ್ಯ ದೇಶಗಳ ಫಾಂಟ್‌ನಲ್ಲಷ್ಟೇ ಇಂತಹದ್ದೊಂದು ಮಾದರಿ ಕಾಣಬಹುದಾಗಿತ್ತು.

ಈ ಮೊದಲು ಆನೆಯ ದಂತ ಹಾಗೂ ಸೊಂಡಿಲನ್ನು ಹೋಲುವ ‘ಬಂಡೀಪುರ ಫಾಂಟ್’ ರಚಿಸಿ ಪ್ರಸಿದ್ಧಿಗೊಂಡಿದ್ದ ಮಂಜುನಾಥ, ಸದ್ಯ ಮೈಸೂರಿನ ‘ರಂಗ್‌ಸನ್ಸ್ ಗ್ರೂಪ್ ಆಫ್ ಕಂಪನೀಸ್’ನಲ್ಲಿ ಲೀಡ್ ಡಿಸೈನರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ಫಾಂಟ್ ರಚನೆಗೆ ಪ್ರೇರಣೆ

ಫಾಂಟ್ ರಚನೆ ಬಗ್ಗೆ ಮಾತನಾಡಿದ ಅವರು, ‘ಇಂಗ್ಲಿಷ್‌ನಲ್ಲಿ ಮಕ್ಕಳ ಪುಸ್ತಕಗಳಲ್ಲಿ ಮಕ್ಕಳೇ ಬರೆದಂತೆ ಕಾಣುವ ಫಾಂಟ್‌ಗಳನ್ನು ಬಳಸಲಾಗುತ್ತದೆ. ಅಂತಹ ಸೌಲಭ್ಯ ಕನ್ನಡದಲ್ಲಿಲ್ಲ ಎಂಬ ಕೊರಗು ನನ್ನಲ್ಲಿ ಬಹುದಿನಗಳಿಂದ ಕಾಡುತ್ತಿತ್ತು. ಹೀಗಾಗಿ, ಒಂದು ವರ್ಷದ ಹಿಂದೆ ಈ ಸಾಹಸಕ್ಕೆ ಕೈ ಹಾಕಿದೆ’ ಎನ್ನುತ್ತಾರೆ.

ಮಕ್ಕಳ ಬರಹಗಳು, ಮಕ್ಕಳೇ ಬರೆದ ಬರಹಗಳನ್ನು ಡಿಜಿಟಲ್ ವೇದಿಕೆಯಲ್ಲಿ ಟೈಪಿಸುವಾಗ, ಪ್ರಕಟಿಸುವಾಗ ಎಲ್ಲರೂ ಸಹಜವಾಗಿ ಬಳಸುವ ಫಾಂಟ್‌ಗಳನ್ನೇ ಬಳಸಲಾಗುತ್ತಿತ್ತು. ಇಂಥ ಬರಹಗಳಿಗೆ, ಸಾಮಾನ್ಯ ಫಾಂಟ್ ಅಳವಡಿಸಿದಾಗ ಅದು ನಿರ್ಜೀವದಂತೆ ಭಾಸವಾಗುತ್ತಿತ್ತು. ಹೀಗಾಗಿ, ಮಕ್ಕಳೇ ಬರೆದಂಥ ಭಾವ ಕಟ್ಟಿಕೊಡಲು ಈ ಫಾಂಟ್ ರಚಿಸಲಾಗಿದೆ ಎಂಬುದು ಮಂಜುನಾಥ ಅವರ ಮಾತು.






‘ಬಂಡೀಪುರ ಫಾಂಟ್ ರಚಿಸುವಾಗ ಎದುರಾದಂತಹ ತಾಂತ್ರಿಕ ಸಮಸ್ಯೆಗಳು ಈಗ ಎದುರಾಗಲಿಲ್ಲ. ಅನುಭವದಿಂದಾಗಿ ಯಾವುದೇ ತಾಂತ್ರಿಕ ತೊಡಕು ಎದುರಾಗದಂತೆ ಮುನ್ನೆಚ್ಚರಿಕೆ ವಹಿಸಿದ್ದೆ. ಕೋಡಿಂಗ್ ಅನ್ನು ಈಗ ನಾನೇ ಕಲಿತುಕೊಂಡಿದ್ದೇನೆ. ಎಲ್ಲ ಭಾಷೆಗಳಲ್ಲೂ ಕಲರ್ ಫಾಂಟ್ ಸಪೋರ್ಟ್ ಮಾಡಲು ಇನ್ನೂ ಅಪ್‌ಡೇಟ್ ಆಗಬೇಕಿದೆ. ಆ ಕಾರ್ಯದಲ್ಲಿ ತೊಡಗಿದ್ದೇನೆ’ ಎನ್ನುವ ಮಂಜುನಾಥ ಅವರ ಈ ಫಾಂಟ್ ಅನ್ನು ದೇಶ ವಿದೇಶಗಳ 441 ಭಾಷೆಗಳಲ್ಲಿ ಬಳಸಬಹುದಾಗಿದೆ.

ಅಡೋಬ್ ಹಾಗೂ ಮೈಕ್ರೊಸಾಫ್ಟ್ ವರ್ಡ್, ವೆಬ್‌ಸೈಟ್‌ಗಳಲ್ಲೂ ಫಾಂಟ್ ಅನ್ನು ಸಲೀಸಾಗಿ ಬಳಸಬಹುದು. ಆ್ಯಪಲ್ ಪೇಜ್‌ನಲ್ಲೂ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿದೆ. ಮಕ್ಕಳು ಪುಸ್ತಕದಲ್ಲಿ ಬರೆಯುವಾಗ ತಪ್ಪು ಮಾಡುವುದು ಸಹಜ. ತಪ್ಪಾದದ್ದನ್ನು ಹೊಡೆದು ಹಾಕಿ (ಚಿತ್ ಮಾಡಿ) ಬರವಣಿಗೆ ಮುಂದುವರೆಸುವಂತೆಯೇ ಈ ಫಾಂಟ್‌ನಲ್ಲಿ ತಪ್ಪಾದ ಅಕ್ಷರವನ್ನು ಚಿತ್ ಮಾಡಿ ಟೈಪಿಸುವ ಸೌಲಭ್ಯ ಕಲ್ಪಿಸಲಾಗಿದೆ. ಇಮೋಜಿ ಮಾದರಿಯಲ್ಲಿ ಮಕ್ಕಳಿಗೆ ಸಂಬಂಧಿಸಿದ ಹಲವಾರು ಚಿಹ್ನೆಗಳನ್ನು ಇದರಲ್ಲಿ ಕಾಣಬಹುದು.

## ಫಾಂಟ್ ತಯಾರಿ ಹೇಗಿತ್ತು?

ಮಕ್ಕಳ ಬರವಣಿಗೆಯನ್ನು ಪರಿಕಲ್ಪನೆಯಾಗಿ ಇಟ್ಟುಕೊಂಡು ಫಾಂಟ್ ಡಿಸೈನ್‌ಗೆ ಮುಂದಾದ ಮಂಜುನಾಥ, ಅದಕ್ಕಾಗಿ ಹಲವಾರು ಮಕ್ಕಳ ಬರವಣಿಗೆ ಪುಸ್ತಕಗಳ ಮಾದರಿಯನ್ನು ಸಂಗ್ರಹಿಸಿ, ಅಧ್ಯಯನ ನಡೆಸಿದ್ದಾರೆ. ಒಂದು, ಎರಡು, ಮೂರನೇ ತರಗತಿ ಮಕ್ಕಳ ಮನೆಗೆಲಸದ ಪುಸ್ತಕಗಳನ್ನು ಪರಿಶೀಲಿಸಿ ಅದೇ ಶೈಲಿಯಲ್ಲೇ ಡಿಜಿಟಲ್ ಫಾಂಟ್ ಡ್ರಾ ಮಾಡಿಕೊಂಡು ನಂತರ ಅದನ್ನು ಫಾಂಟ್ ಆಗಿ ರೂಪಿಸಿದ್ದಾರೆ. ಚಿಕ್ಕಮಕ್ಕಳ ಬರವಣಿಗೆಯ ಶೈಲಿಯನ್ನು ಅಳವಡಿಸಿಕೊಂಡ ಕಾರಣಕ್ಕೆ ಈ ಫಾಂಟ್‌ಗೆ ಸಾಂಕೇತಿಕವಾಗಿ ಚಿಕ್ಕಮಗಳೂರು ಫಾಂಟ್ ಎಂದು ಹೆಸರಿಸಿದ್ದಾರೆ.

## ಮೊದಲ ಬಣ್ಣದ ಫಾಂಟ್

‘ಎಟಿಎಸ್ ಚಿಕ್ಕಮಗಳೂರು’ ಎರಡು ಮಾದರಿಯಲ್ಲಿ ಲಭ್ಯ. ಒಂದು ಬಣ್ಣದ ಮಾದರಿಯಲ್ಲಿದ್ದರೆ, ಮತ್ತೊಂದು ರೆಗ್ಯುಲರ್ ಮಾದರಿ. ಬಣ್ಣದ ಫಾಂಟ್ ಆಕರ್ಷಕವಾಗಿದ್ದು, ಮಕ್ಕಳೇ ಅಕ್ಷರಗಳಿಗೆ ಬಣ್ಣ ತುಂಬಿದಂತೆ ಕಾಣುತ್ತದೆ. ಈ ಎರಡರ ಪೈಕಿ ಬಳಕೆದಾರರು ತಮಗೆ ಅಗತ್ಯವಾದ ಫಾಂಟ್ ಬಳಸಬಹುದು.

ಬಣ್ಣದ ಫಾಂಟ್ ಕನ್ನಡದ ಮಟ್ಟಕ್ಕೆ ಹೊಸತು. ಇಂಗ್ಲಿಷ್ ಸೇರಿದಂತೆ ಹಲವು ಪಾಶ್ಚಾತ್ಯ ಭಾಷೆಗಳ ಫಾಂಟ್‌ನಲ್ಲಿ ಈ ಮಾದರಿಯ ಬಳಕೆ ಈಗಾಗಲೇ ಕಾಣಬಹುದು. ಕನ್ನಡದ ಫಾಂಟ್‌ಗಳಲ್ಲಿ ಬಣ್ಣವನ್ನು ಬಳಸಿದ ಬಗೆಯನ್ನು ಇದುವರೆಗೆ ಯಾರೂ ಪರಿಚಯಿಸಿರಲಿಲ್ಲ. ಇದಕ್ಕೆ ಉತ್ತರಿಸಿದ ಅವರು, ‘ಮಕ್ಕಳ ಬರವಣಿಗೆಗೆ ಅವರದ್ದೇ ಆದ ಫೀಲ್ ಇರುತ್ತೆ. ದೃಷ್ಟಿಕೋನವಿರುತ್ತೆ. ಆ ಕಾರಣಕ್ಕೆ ಬಣ್ಣದ ಫಾಂಟ್ ರಚಿಸಿದೆ’ ಎಂದರು.

ಕಲರ್ ಫಾಂಟ್ ಇನ್‌ಬಿಲ್ಟ್ ಆಗಿ ಬಣ್ಣವನ್ನು ಒಳಗೊಂಡಿರುತ್ತದೆ. ನಾರ್ಮಲ್ ಫಾಂಟ್‌ಗಳ ಬಳಕೆಯಲ್ಲಿ ಅಗತ್ಯಕ್ಕೆ ತಕ್ಕಂತೆ ಬಣ್ಣ ತುಂಬುವ ಅವಕಾಶವಿದೆ. ಈ ಫಾಂಟ್‌ನಲ್ಲಿ ಡಿಸೈನರ್‌ಗಳು ವೈಯಕ್ತಿಕವಾಗಿ ಅಗತ್ಯಕ್ಕೆ ತಕ್ಕಂತೆ ಬಣ್ಣ ತುಂಬಲು ಸಾಧ್ಯವಿಲ್ಲ. ಆದರೆ ಫಾಂಟ್ ಒಳಗಡೆಯೇ ಕಲರ್ ಎಂಬೆಡ್ ಆಗಿರುತ್ತದೆ. ಆದರೆ, ವೆಬ್‌ಸೈಟ್‌ನಲ್ಲಿ ಸಿಎಫ್‌ಎಸ್ ಕೋಡ್ ಮೂಲಕ ಕೋಡಿಂಗ್ ಮಾಡಿ ಫಾಂಟ್‌ನ ಬಣ್ಣ ಬದಲಿಸಬಹುದು.

**aksharatypestudio.in** ವೆಬ್‌ಸೈಟ್‌ನಲ್ಲಿ ಈ ಫಾಂಟ್ ಡೌನ್‌ಲೋಡ್ ಮಾಡಬಹುದು. ■